# ಎಡವೂ ಅಲ್ಲ, ಬಲವೂ ಅಲ್ಲ! : ಪ್ರಕಾಶ್ ರೈ

ಬೇರೆ ಬೇರೆ ಹೆಸರಿನಲ್ಲಿ 30—40 ಜನ ಈ ಕೆಲಸ ಮಾಡುತ್ತಿದ್ದಾರೆ. ಅದಕ್ಕೆ ಅವರಿಗೆ ಪೇಮೆಂಟ್ ಕೂಡಾ ಸಿಗುತ್ತಿದೆ ಎನ್ನುವುದೂ ನನಗೆ ಗೊತ್ತಿದೆ. ಇದರಿಂದ ನನ್ನ ನೈತಿಕತೆಯನ್ನು ಕುಂದಿಸಲು ಸಾಧ್ಯವಿಲ್ಲ. ನನ್ನನ್ನು ಹೆದರಿಸಲು ಸಾಧ್ಯವಿಲ್ಲ. ಯಾರೋ ಒಬ್ಬ ಸಂಸದ ನನ್ನ ಕುರಿತು – ಈತ ಯಾವ ಗಾಯಕಿಯ ಮನೆಯಿಂದ ಎದ್ದು ಬಂದು ಹೀಗೆ ಮಾತನಾಡುತ್ತಿದ್ದಾನೆ– ಎಂದೆಲ್ಲ ಜಾಲತಾಣದಲ್ಲಿ ಬರೆದುಕೊಂಡಿದ್ದಾನೆ. ಅದಕ್ಕೆ ನಾನು ಉತ್ತರಿಸು–ವುದಿಲ್ಲ. ಆದರೆ ಆತನ ಪಕ್ಷದ ನಾಯಕರು ಆತನಿಗೆ ಬುದ್ಧಿ ಹೇಳಬೇಕು. ನಾನು ಎತ್ತಿದ ಪ್ರಶ್ನೆಗಳ ಬಗ್ಗೆ ಉತ್ತರ ನೀಡಲು ಇವರ ಬಳಿ ಇಲ್ಲದಾಗ ಹೀಗೆ ಏನನ್ನೋ ಹೇಳಿ ದಾರಿ ತಪ್ಪಿಸುತ್ತಾರೆ' ಎಂದು ಸಿಟ್ಟಿನಿಂದಲೇ ಪ್ರಕಾಶ್ ಮಾತು ಶುರು ಮಾಡಿದರು.

'ತಾಜ್‌ಮಹಲ್ ಬಗ್ಗೆಯೂ ಹೀಗೆಯೇ ಬಾಯಿಗೆ ಬಂದದ್ದು ಹೇಳುತ್ತಿದ್ದಾರೆ. ಅದಕ್ಕೇ... ಯಾವಾಗ ಅದನ್ನು ಕೆಡಹುತ್ತೀರಿ, ನನ್ನ ಮಕ್ಕಳಿಗೆ ಕೊನೆಯದಾಗಿ ಒಮ್ಮೆ ತೋರಿಸಿಕೊಂಡು ಬರಬೇಕಿದೆ... ಎಂದು ಹೇಳಿಕೆ ಕೊಟ್ಟೆ. ಪ್ರವಾಸೀ ಸ್ಥಳಗಳ ಪಟ್ಟಿಯಿಂದ ಅದನ್ನು ಕಿತ್ತು ಹಾಕಿದ ಅದೇ ಮುಖ್ಯಮಂತ್ರಿ ಅಲ್ಲಿಗೆ ಹೋಗಿ ನಾಟಕೀಯವಾಗಿ ಸ್ವಚ್ಛ ಭಾರತದ ಹೆಸರಿನಲ್ಲಿ ಕಸ ಗುಡಿಸುತ್ತಾರೆ. ಮೊದಲು ಅವರ ಆತ್ಮವನ್ನು ಸ್ವಚ್ಛಗೊಳಿಸಿಕೊಳ್ಳಲಿ...' – ರೈ ಸಿಟ್ಟು ಮುಂದುವರಿದಿತ್ತು.

★ ಎಲ್ಲದಕ್ಕೂ ಪ್ರಧಾನಿ ಮೋದಿಯವರು ಉತ್ತರ ಕೊಡಬೇಕಿಲ್ಲ ಎನ್ನುತ್ತಾರಲ್ಲಾ..?

ರೈ: ಯಾಕೆ ಕೊಡಬಾರದು? ಅವರು ಪ್ರಧಾನಿಯಾಗಿದ್ದಾಗ ಎಲ್ಲರಂತೆ ನಾನೂ ನೂರಾರು ನಿರೀಕ್ಷೆಗಳನ್ನು ಇಟ್ಟುಕೊಂಡಿದ್ದೆ. ಅವರ ಮಾತುಗಳನ್ನು ನಂಬಿದ್ದೆ. ಕೋಟಿ ಉದ್ಯೋಗ ಸೃಷ್ಟಿಸುವುದಾಗಿ ಹೇಳಿದರು, ಎಲ್ಲಿದೆ ಉದ್ಯೋಗ? ನೋಟ್ ಬ್ಯಾನ್ ಮಾಡಿ ಜನಸಾಮಾನ್ಯರನ್ನು ಸಂಕಷ್ಟಕ್ಕೆ ಸಿಲುಕಿಸಿದರು. ಒಬ್ಬ ಪತ್ರಕರ್ತೆಯನ್ನು ಹಾಡಹಗಲೇ ಕೊಲೆ ಮಾಡಿದ್ದಂತೂ ಗಂಭೀರ ವಿಷಯ. ನಿಮಗೆ ಇಷ್ಟವಿರಲಿ, ಇಲ್ಲದಿರಲಿ– ಅವರು ನಮ್ಮ ಪ್ರಧಾನಿ. ಒಬ್ಬ ಸಾಮಾನ್ಯ ಪ್ರಜೆಯಾಗಿ ಅವರನ್ನು ಪ್ರಶ್ನೆ ಮಾಡದೆ ಇನ್ನಾರನ್ನು ಕೇಳಬೇಕು? ಅವರನ್ನು ನಟ ಅಂದಿದ್ದು ನಿಜ. ಅದರಲ್ಲಿ ವ್ಯಂಗ್ಯ ಇದ್ದದ್ದೂ ನಿಜ. ಕೆಲವೊಮ್ಮೆ ವ್ಯಂಗ್ಯ ಬೇಗ ಅರ್ಥವಾಗುತ್ತದೆ. ಪ್ರಜಾಪ್ರಭುತ್ವದಲ್ಲಿ ಪ್ರಶ್ನೆ ಕೇಳುವ ನನ್ನ ಹಕ್ಕನ್ನು ನಾನು ಚಲಾಯಿಸಿದ್ದೇನೆ. ಅಷ್ಟಕ್ಕೇ ನೀವು ನನ್ನನ್ನು ಮೋದಿ ವಿರೋಧಿ ಎಂದು ತಿಳಿದುಕೊಂಡರೆ ನಾನೇನೂ ಮಾಡಲಾಗದು.

★ ನೀವು ಕಮ್ಯುನಿಸ್ಟ್ ಅಂತೆ? ಲೆಫ್ಟ್ ಪಾರ್ಟಿ ಅಂತೆ..?

ರೈ: ನಾನು ಲೆಫ್ಟೂ ಅಲ್ಲ, ರೈಟೂ ಅಲ್ಲ. ನನ್ನ ಅತೃಪ್ತಿಯನ್ನು ಹೊರಹಾಕಿ–ದ್ದೇನೆ ಅಷ್ಟೆ. ರಾಜಕೀಯದಲ್ಲಿ ನನಗೆ ಆಸಕ್ತಿಯೂ ಇಲ್ಲ. ನನ್ನ ಹೇಳಿಕೆಗಳನ್ನು ಇಟ್ಟುಕೊಂಡು ಬೇರೆ ರಾಜಕೀಯ ಪಕ್ಷದವರು ಹೇಗೆ ಬಳಸಿಕೊಳ್ಳಲು ಯತ್ನಿಸುತ್ತಿದ್ದಾರೆ ಎನ್ನುವುದೂ ನನಗೆ ಗೊತ್ತಿದೆ. ಅದಕ್ಕೆಲ್ಲ ನಾನು ತಲೆ ಕೆಡಿಸಿ–ಕೊಳ್ಳುವುದಿಲ್ಲ. ನನಗೆ ಅನ್ನಿಸಿದ್ದನ್ನು ಹೇಳಿದ್ದೇನೆ, ಮುಂದೆಯೂ ಹೇಳುತ್ತೇನೆ.

★ ಏನಿದು? ಯಾವಾಗಲೂ ಜಗಳದ ಮೂಡ್‌ನಲ್ಲಿ ಇರುತ್ತೀರಾ..? ಹಿಂದೆ ತೆಲುಗು ಚಿತ್ರರಂಗದಲ್ಲಿ ನಿಮ್ಮನ್ನು ಆರು ಸಲ ಬಹಿಷ್ಕರಿಸಿದರು.. ಇತ್ತೀಚೆಗೆ ಕಾವೇರಿ ವಿಷಯಕ್ಕೆ ಸಂಬಂಧಿಸಿದ ಪ್ರಶ್ನೆಯೊಂದಕ್ಕೆ ಟಿ.ವಿ ಷೋ ನಿಂದ ಎದ್ದು ಹೋದಿರಿ?

ರೈ: ತೆಲುಗು ಚಿತ್ರರಂಗದಲ್ಲಿ ಹಲವಾರು ಸಲ ವಿವಾದ ಆದದ್ದು ನಿಜ. ನನ್ನನ್ನು ಬಹಿಷ್ಕರಿಸಿದ್ದೂ ನಿಜ. ಆದರೆ ಮತ್ತೆ ಮತ್ತೆ ಕರೆದು ಪಾತ್ರ ಕೊಡುತ್ತಿದ್ದಾರಲ್ಲಾ..? ಕೆಲವು ಪ್ರಕರಣಗಳಲ್ಲಿ ನನ್ನದು ತಪ್ಪು ಇರಲೂಬಹುದು. ನಾನು ಸತ್ಯವಾದದ್ದನ್ನು ನೇರವಾಗಿ ಹೇಳುತ್ತೇನೆ. ಅಲ್ಲದೆ ಅವಕಾಶಗಳು ನನಗೆ ಹೆಚ್ಚು ಸಿಗುವುದರಿಂದ ಅಲ್ಲಿ ಕೆಲವರಿಗೆ ತೊಂದರೆ ಆಗಿರಲೂಬಹುದು.

ಇನ್ನು ನೀವು ಹೇಳಿದ ಕಾವೇರಿ ವಿಷಯದ ಟಿ.ವಿ ಸಂದರ್ಶನ. ಅವತ್ತು ಚಿತ್ರವೊಂದರ ಪ್ರಚಾರಕ್ಕೆ ಟಿ.ವಿ ಯವರು ಬಂದಿದ್ದರು. ಒಂದು ಟಿ.ವಿ ಯ ವರದಿಗಾರರು ಪದೇ ಪದೇ ಕಾವೇರಿ ವಿವಾದದ ಕುರಿತು ಪ್ರಶ್ನೆ ಕೇಳತೊಡಗಿದರು. ನಾನು ಅವರಲ್ಲಿ ಮನವಿ ಮಾಡಿದೆ– ಇದು ಅದಕ್ಕೆ ವೇದಿಕೆ ಅಲ್ಲ. ಅಷ್ಟು ದೊಡ್ಡ ವಿಷಯವನ್ನು ಇಷ್ಟು ಸಣ್ಣ ಅವಧಿಯಲ್ಲಿ ಉತ್ತರಿಸಲು ಆಗುವುದಿಲ್ಲ, ಇನ್ನೊಮ್ಮೆ ಮಾತನಾಡೋಣ– ಎಂದೆ. ಒಂದಲ್ಲ, ಎರಡಲ್ಲ, ಮೂರು ಸಲ ಇದನ್ನೇ ಹೇಳಿದೆ. ಆದರೆ ಅವರು ಮತ್ತೆ ಮತ್ತೆ ಅದೇ ಪ್ರಶ್ನೆಯನ್ನು ಕೇಳಿದಾಗ ನಾನು ಸಿಟ್ಟಿನಿಂದ ಎದ್ದು ಹೋಗಲೇಬೇಕಾಯಿತು. ಅಲ್ಲಿ ನಡೆದ ಪೂರ್ತಿ ಮಾತುಕತೆಯನ್ನು ಅವರು ಪ್ರಸಾರ ಮಾಡಲಿಲ್ಲ. ಎಡಿಟ್ ಮಾಡಿ ತೋರಿಸಿದರು.

★ ತಮಿಳಿನಲ್ಲಿ ವಿಜಯ್ ಅಭಿನಯದ 'ಮೆರ್ಸಲ್' ಸಿನಿಮಾದಲ್ಲಿ ಜಿಎಸ್‌ಟಿ ಕುರಿತ ಡೈಲಾಗ್ ವಿವಾದವಾಯಿತು. ಡೈಲಾಗ್ ಕಿತ್ತು ಹಾಕಲು ಒತ್ತಡ ಹೇರಲಾಯಿತು. ನಿರ್ಮಾಪಕ ವಿಶಾಲ್ ಕಚೇರಿಗೆ ತೆರಿಗೆ ಅಧಿಕಾರಿಗಳು ದಾಳಿ ಮಾಡಿದರು..?

ರೈ: ಸಿನಿಮಾದ ಡೈಲಾಗ್ ತೆಗೆದು ಹಾಕಲು ಒತ್ತಡ ಹೇರಿದ್ದು ಖಂಡಿತಾ ಸರಿಯಲ್ಲ. ಜತೆಗೆ ಪ್ರತಿಭಟನೆಕಾರರು ವಿಜಯ್ ಅವರ ಧರ್ಮವನ್ನೂ ಎಳೆದು ತಂದದ್ದು ದೊಡ್ಡ ತಪ್ಪು. ಆದರೆ ಇಲ್ಲಿ ಇನ್ನೊಂದು ಪ್ರಶ್ನೆ ಇದೆ. ಜಿಎಸ್‌ಟಿ ಆಗಲೀ ಇನ್ನೇನೇ ಆಗಲಿ, ನೀವು ಸಿನಿಮಾದಲ್ಲಿ ಡೈಲಾಗ್‌ಗಳನ್ನು ಹೊಡೆ–ಯೋದು ಸುಲಭ. ಅದೇ ಸಿನಿಮಾದ ಹೊರಗೆ ಅದರ ಬಗ್ಗೆ ನಿಮ್ಮ ನಿಲುವೇನು? ಹೊರಗೆ ಏಕೆ ನೀವು ಪ್ರಶ್ನಿಸುತ್ತಿಲ್ಲ? ನಮ್ಮ ಬಹುತೇಕ ಹೀರೋಗಳಿಗೆ ನಾನು ಈ ಪ್ರಶ್ನೆಯನ್ನು ಕೇಳುತ್ತೇನೆ. ಬರೀ ಸಿನಿಮಾದಲ್ಲಿ ಡೈಲಾಗ್ ಹೊಡೆದರೆ ಸಾಕೆ? ಜನಸಾಮಾನ್ಯರ ತೊಂದರೆಗಳಿಗೆ ನೀವು ಹೊರಜಗತ್ತಿನಲ್ಲಿ ಏಕೆ ರಿಯಾಕ್ಟ್ ಮಾಡುತ್ತಿಲ್ಲ? ಈ ಪ್ರಶ್ನೆಯನ್ನು ನೀವು ಮಾಧ್ಯಮದವರು ಕೇಳಬೇಕು. ಅವತ್ತು ನಿರ್ಮಾಪಕ ವಿಶಾಲ್ ಅವರ ಕಚೇರಿಗೆ ತೆರಿಗೆ ಅಧಿಕಾರಿಗಳು ಬಂದದ್ದಕ್ಕೂ ಇದಕ್ಕೂ ಸಂಬಂಧವಿಲ್ಲ ಎನ್ನುವುದು ಆ ಬಳಿಕ ಗೊತ್ತಾಯಿತು.

(37ನೇ ಪುಟ ನೋಡಿ)